ಸೈಬರ್ ಫೋರೆನ್ಸಿಕ್ ಕಛೇರಿ

2331 (1440); ಶ್ರೀ ನರೇಂದ್ರಸ್ವಾಮಿ ಪಿ.ಎಂ. (ಮಳವಳ್ಳಿ)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂತರ್ಜಾಲ ಸಂಬಂಧಿ ಅಪರಾಧ ವರದಿಯಾಗಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ಪ್ರಕರಣಗಳ ಸಂಪೂರ್ಣ ಮಾಹಿತಿ ನೀಡುವುದು)

ಆ) ಸರ್ಕಾರವು ಈ ಪ್ರಕರಣಗಳಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳುವುದು; ಸೈಬರ್ ಫೋರೆನಿಕ್ಸ್ ವಿಭಾಗದಿಂದ ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಲಾಗುತ್ತದೆಯೇ;

ಇ) ಪ್ರಸಕ್ತ ರಾಜ್ಯದಲ್ಲಿರುವ ಸೈಬರ್ ಫೋರೆನಿಕ್ಸ್ ಕಛೇರಿಗಳೆಷ್ಟು; ಸ್ಥಳಗಳಾವುವು; ಸದರಿ ಕಛೇರಿಗಳಿಗೆ ಮಂಜೂರಾಗಿರುವ ವೃಂದ ಮತ್ತು ಹುದ್ದೆಗಳ ವಿವರ ನೀಡುವುದು;

ಈ) ಇವುಗಳನ್ನು ಪ್ರತಿ ಜಿಲ್ಲೆಯಲ್ಲಿ ಪ್ರಾರಂಭಿಸಲಾಗುವ ಚಿಂತನೆ ಸರ್ಕಾರದ ಮುಂದಿದೆಯೇ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳು ಅಂದರೆ 2012 ರಿಂದ 2015 (ಜೂನ್ 30) ರ ವರೆಗೆ ಅಂತರ್ಜಾಲ ಸಂಬಂಧಿ ಅಪರಾಧಗಳಿಗೆ ಸಂಬಂಧಿಸಿದಂತೆ, ಸೈಬರ್ ಕ್ರೈಂ ಅಪರಾಧ ವಿಭಾಗ, ಸಿಐಡಿ, ಬೆಂಗಳೂರು ಹಾಗೂ ವಲಯವಾರು ಸೈಬರ್ ಕ್ರೈಂ ಪೊಲೀಸ್ ಠಾಣೆಗಳಲ್ಲಿ ವರದಿಯಾದ ಪ್ರಕರಣಗಳು ಈ ಕೆಳಕಂಡಂತಿದೆ.

1) ಸೈಬರ್ ಕ್ರೈಂ ವಿಭಾಗ, ಸಿಐಡಿ, ಬೆಂಗಳೂರು–150 ಪ್ರಕರಣಗಳು
2) ಧಾರವಾಡ 09 ಪ್ರಕರಣಗಳು
3) ದಾವಣಗೆರೆ–03 ಪ್ರಕರಣಗಳು
4) ಮಂಗಳೂರು–05 ಪ್ರಕರಣಗಳು

5) ಮೈಸೂರು–01 ಪ್ರಕರಣಗಳು ಮತ್ತು

6) ಕಲಬುರ್ಗಿ–03 ಪ್ರಕರಣಗಳು

ವರ್ಷವಾರು ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಿದೆ.

ಆ) ಸದರಿ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಹಾಗೂ ಐ.ಪಿ.ಸಿ ಕಾಯ್ದೆಯ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಇಂತಹ ಅಪರಾಧಗಳನ್ನು ಸೈಬರ್ ಫೋರೆನಿಕ್ಸ್ ವಿಭಾಗದಿಂದ ಪತ್ತೆ ಹಚ್ಚಲಾಗುತ್ತಿದೆ.

ಇ) ಪ್ರಸ್ತುತ ಸೈಬರ್ ಫೋರೆನಿಕ್ಸ್ ವಿಭಾಗವು ನ್ಯಾಯ ವಿಜ್ಞಾನ ಪ್ರಯೋಗಾಲಯ, ಮಡಿವಾಳ ಬೆಂಗಳೂರಿನಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದೆ. ಈ ವಿಭಾಗಕ್ಕೆ ಸಂಬಂಧಿಸಿದಂತೆ, ಸದ್ಯ ಯಾವುದೇ ತಾಂತ್ರಿಕ ಹುದ್ದೆಗಳು ಸೃಜನೆಯಾಗಿರುವುದಿಲ್ಲ.

ಈ) ಆಯವ್ಯಯದ ಲಭ್ಯತೆಗನುಗುಣವಾಗಿ ಈ ಕುರಿತು ಪರಿಶೀಲಿಸಲಾಗುವುದು.

ಪಶ್ನೆ, ವಿಧಾನ ಸಭಾ ಸದಸ್ಯರಾದ ಶ್ರೀ ಸಿರೀಯಣ್ಣ ಸಿದ್ದಿ ಪಿ.ಎಂ. ಬಸವ ಪಟ್ಟಣ ಗಿರಿಯಪ್ಪಲಿಯ ಪಶ್ನೆ ಸಂಖ್ಯೆ:14.ರ

ಉತ್ತರಿಸುವರು

Bangalore Cyber Crime Police Station

Year	Reported
2012	39
2013	49
2014	50
2015	12
Total	150

Note: Range wise Cyber Crime Police Station, was established in 2013 but came to force from 2014.

Mysore Cyber Crime Police Station

Year	Reported
2014	--
2015	01
Total	01

Mangalore Cyber Crime Police Station

Year	Reported
2014	--
2015	05
Total	05

Dharwad Cyber Crime Police Station

Year	Reported
2014	05
2015	03
Total	08

Davangere Cyber Crime Police Station

Year	Reported
2014	03
2015	--
Total	03

Kalburgi Cyber Crime Police Station

Year	Reported
2014	02
2015	01
Total	03